೭. ಬೆಂಗಳೂರಿನ ಲಾಲ್‌ಬಾಗ್ ಸಿದ್ದಾಪುರ ಬಡಾವಣೆಯಲ್ಲಿರುವ ಲೋಕೋಪಯೋಗಿ ವಸತಿ ಗೃಹಗಳಿಗೆ ಸೌಲಭ್ಯ ಒದಗಿಸಂವುದು.

ಶ್ರೀ ರಾಮಲಿಂಗರೆಡ್ಡಿ.—ನನ್ನ ಮತ ಕ್ಷೇತ್ರಕ್ಕೆ ಸಂಬಂಧಿಸಿದ ಲಾಲ್‌ಬಾಗ್ ಸಿದ್ದಾಪುರ ಬಡಾವಣೆಯಲ್ಲಿರುವ ಸರ್ಕಾರಿ ಲೋಕೋಪಯೋಗಿ ವಸತಿ ಗೃಹಗಳಲ್ಲಿನ ೩ ಹಾಗೂ ೬ನೇ ಬ್ಲಾಕ್‌ಗೆ ಮಾತ್ರ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದ್ದು (ಲೋಕೋಪಯೋಗಿ ಹಾಗೂ ಮುಖ್ಯ ಮಂತ್ರಿಗಳವರ ಕಾರ್ಯಾಲಯ ಹಾಗೂ ಸಚಿವಾಲಯದ ನೌಕರರುಗಳಿರುವುದರಿಂದ) ಅಂದರೆ ವಾಹನ ಶೆಡ್ಡು, ಸೊಳ್ಳೆಮೆಶ್, ಚರಂಡಿ ಮೇಲೆ ಚಪ್ಪಡಿ, ನೆಲವನ್ನು ಸಿಮೆಂಟ್ ಹಾಕಿ ಸಮತಟ್ಟು ಹಾಗೂ ಮನೆಯೊಳಗಿನ ದುರಸ್ತಿಕಾರ್ಯಗಳಿಂದ ೧, ೨ ಮತ್ತು ೫ನೇ ಸಂಖ್ಯೆ ಬ್ಲಾಕ್‌ಗಳಿಗೆ ತಾರತಮ್ಯವಾಗಿ ಈ ಸೌಲಭ್ಯಗಳಿಂದ ವಂಚಿತರಾಗಿರುವುದನ್ನು ಈ ನಿಯಮದಡಿಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಶ್ರೀ ಜಿ ಪುಟ್ಟಸ್ವಾಮಿಗೌಡ. —ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂಥ ವಸತಿ ಗೃಹಗಳಲ್ಲಿ ಇರತಕ್ಕಂಥ ತಾರತಮ್ಯವನ್ನು ಸರಿಪಡಿಸತಕ್ಕಂಥಾದ್ದಕ್ಕೆ ಮತ್ತು ಸವಲತ್ತುಗಳನ್ನು ಒದಗಿಸ ತಕ್ಕಂಥಾದ್ದಕ್ಕೆ ಮಾನ್ಯ ಸದಸ್ಯರು ಏನು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ, ಇದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುತ್ತೇದೆ.

೮. ಹೆಗ್ಗಡದೇವನಕೋಟೆಯ ಸುತ್ತಮುತ್ತಲಿನ ಹಳ್ಳಿಗಳಿಗೆ ಬಸ್ ಸೌಕರ್ಯ ಒದಗಿಸುವ ಬಗ್ಗೆ

ಶ್ರೀ ಎ೦. ಪಿ. ವೆಂಕಟೇಶ್. —ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಸುತ್ತಮುತ್ತ ಹಳ್ಳಿಗಳಿಗೆ ಓಡಾಡಲು ಒಂದು ಸ್ಪೇರ್ ಬಸ್ಸನ್ನು ನೀಡಬೇಕೆಂದು ಕೋರುತ್ತೇನೆ ಮತ್ತು ಬೆಂಗಳೂರಿನಿಂದ ಹೆಗ್ಗಡ ದೇವನಕೋಟೆಗೆ, ಹೆಗ್ಗಡದೇವನಕೋಟೆಯಿಂದ ಬೆಂಗಳೂರಿಗೆ ನಾನ್ ಸ್ಟಾಪ್ ಬಸ್ಸನ್ನು ಓಡಾಡಿಸ ಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೆ, ಹೆಗ್ಗಡದೇವನ ಕೋಟೆಯು ಮೈಸೂರು ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿರುತ್ತದೆ. ಇದರ ಜನಸಂಖ್ಯೆ ೬೧೫೩ ಹಾಗೂ ಪೂರ್ಣ ತಾಲ್ಲೂಕಿನ ಜನಸಂಖ್ಯೆ ೧,೭೩,೦೭೧ ೧೯೮೧ರ ಜನಗಣತಿಯ ಪ್ರಕಾರ ಇರುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮೈಸೂರು ಮತ್ತು ಹೆಚ್.ಡಿ. ಕೋಟೆಯ ನಡುವೆ ಉದ್ದೂರು, ಜಯಪುರ ಮತ್ತು ಹಂಪಾಪುರ ಮಾರ್ಗವಾಗಿ ೨೮ ಟ್ರಿಪ್ಪುಗಳನ್ನು ಓಡಿಸುತ್ತಿದೆ, ಮೈಸೂರಿನಿಂದ ಹೆಚ್.ಡಿ.ಕೋಟೆಗೆ ಭೋಗಾದಿ, ಗದ್ದಿಗೆ ಮುಖಾಂತರ ಸಹ ಬಸ್ಸುಗಳನ್ನು ಓಡಿಸುತ್ತಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹತ್ತಿರದ ಸುತ್ತಮುತ್ತಲ ಹಳ್ಳಿಗಳಿಗೆ ಸಾರಿಗೆ ಸೌಕರ್ಯವನ್ನು ಒದಗಿಸಲು ಈ ಕೆಳಗಿನಂತೆ ಮೂದಿಸಿದ ಹಳ್ಳಿಗಳಿಗೆ ಹೆಚ್.ಡಿ.ಕೋಟೆಯಿಂದ, ಬಸ್ಸುಗಳನ್ನು ಓಡಿಸುತ್ತಿದೆ. (೧) ಹೆಚ್. ಡಿ. ಕೋಟೆ – ಬೆದರಹಳ್ಳಿ, (೨) ಬೀಚನಹಳ್ಳಿ, (೩) ಹುಲ್ಲಳ್ಳಿ, (೪) ಹುರ, (೫) ಸರ್ಗೂರು, (೬) ಗದ್ದಿಗೆ ಮತ್ತು (೭) ನಂಜನಗೂಡು

ಇದಲ್ಲದೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೈಸೂರಿನಿಂದ (೧) ತಾರಕಾಪುರ ಪ್ರಾಜೆಕ್ಟ್, (೨) ಹೆಬ್ಬಲಕುಪ್ಪೆ, (೩) ಬೆಗೂರು ಕಾಲೋನಿ, (೪) ಸರಗೂರು (೫) ಮುಳ್ಳೂರು ಮತ್ತು (೬) ಆಗಸರ ಪುಂಡಿಗೂ ಸಹ ಬಸ್ಸುಗಳನ್ನು ಓಡಿಸುತ್ತಿದೆ.

ಇದರಿಂದ ಹೆಚ್.ಡಿ, ಕೋಟೆಯ ಸುತ್ತಮುತ್ತಲ ಹಳ್ಳಿಗಳಿಗೆ ಸಾಕಷ್ಟು ಸಾರಿಗೆ ಸೌಕರ್ಯವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒದಗಿಸಿರುವುದು ವ್ಯಕ್ತವಾಗುತ್ತದೆ. ಈಗ ಮಳೆಗಾಲ ವಾಗಿದ್ದು ಪ್ರಯಾಣಿಕರ ಒತ್ತಡ ಬಹಳ ಕಡಿಮೆ ಇರುವುದರಿಂದಲೂ ಸಧ್ಯಕ್ಕೆ ಒಂದು ವಾಹನವನ್ನು ಹೆಚ್‌ಡಿ.ಕೋಟೆಯ ಸುತ್ತಮುತ್ತಲ ಹಳ್ಳಿ ಗಳಿಗೆ ಓಡಿಸುವ ಅವಶ್ಯಕತೆ ಕಾಣುವುದಿಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಒಂದು ವೇಗದೂತ ಬಸ್ಸನ್ನು ಬೆಂಗಳೂರಿನಿಂದ ಹೆಚ್.ಡಿ. ಕೋಟೆಗೆ ದಿನಾಂಕ ೩–೬–೮೮ ರಿಂದ ಪ್ರಾರಂಭಿಸಿ ಓಡಿಸುತ್ತಿದ್ದರು. ಆದರೆ, ಅದು ಒಂದು ವರ್ಷ ಕಳೆದರೂ ಜನಪ್ರಿಯವಾಗದೆ ಮತ್ತು ಜನಗಳ ಒತ್ತಡವಿಲ್ಲದ ಕಾರಣ ಆ ಬಸ್ಸನ್ನು ಹಿಂತೆಗೆದು ಕೊಳ್ಳಲಾಯಿತು. ಆದಾಗ್ಯೂ ಕೋಲಾರದಿಂದ ಸರಗೂರಿಗೆ ಬೆಂಗಳೂರು, ಮೈಸೂರು, ಹೆಚ್‌ಡಿ. ಕೋಟೆ ಮುಖಾಂತರ ಒಂದು ಬಸ್ಸನ್ನು ಓಡಿಸಲಾಗುತ್ತಿದೆ. ಇದರ ಉಪಯೋಗವನ್ನು ಬೆಂಗಳೂರು ಮತ್ತು ಹೆಚ್.ಡಿ. ಕೋಟೆಯ ಪ್ರಯಾಣಿಕರು ಪಡೆಯಬಹುದಾಗಿರುತ್ತದೆ.